ಶ್ರೀ ಎಚ್. ಎಲ್. ತಿಮ್ಮೇಗೌಡ.—ಸ್ವಾಮಿ, ಬೆಂಗಳೂರಿನಿಂದ ಊಟಿಗೆ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ ಹೋಗುತ್ತದೆ ಮತ್ತು ಅಲ್ಲಿಂದ ಬೆಂಗಳೂರಿಗೆ ಬರುತ್ತದೆ. ತಮಿಳುನಾಡಿನ ಬಸ್‌ಗಳೂ ಸಹ ಅಲ್ಲಿಗೆ ಹೋಗುತ್ತವೆ ಮತ್ತು ಇಲ್ಲಿಗೆ ಬರುತ್ತವೆ. ಅಲ್ಲಿಂದ ಬೆಂಗಳೂರಿಗೆ ಬರುವಾಗ ನಮ್ಮ ಬಸ್ ತುಂಬುವುದಿಲ್ಲ. ಎಲ್ಲರೂ ತಮಿಳುನಾಡಿನ ಬಸ್‌ಗಳಲ್ಲಿ ಬರುವುದಕ್ಕೆ ಇಚ್ಛೆಪಡುತ್ತಾರೆ. ಇದು ಮಾನ್ಯಮಂತ್ರಿಯವರ ಗಮನಕ್ಕೆ ಬಂದಿದೆಯೇ ? ಹಾಗೆ ಬಂದಿದ್ದರೆ ನಮ್ಮಲ್ಲಿ ಕೂಡ ಹೆಚ್ಚಿನ ಬಸ್‌ಗಳನ್ನು ಪ್ರಾತಿ ಪ್ರಯಾಣಿಕರಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸುವ ಬಗ್ಗೆ ವಿಚಾರ ಮಾಡುತ್ತೀರಾ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇದು ನಮ್ಮ ಗಮನಕ್ಕೆ ಬಂದಿಲ್ಲ. ತಾವು ಈ ವಿಚಾರವನ್ನು ಈಗ ನನ್ನ ಗಮನಕ್ಕೆ ತಂದಿದ್ದೀರಿ. ಇದರ ಬಗ್ಗೆ ನಾನು ವಿಚಾರ ಮಾಡುತ್ತೇನೆ.

ಶ್ರೀ ಪಿ. ರಾಮದೇವ್.—ಸ್ವಾಮಿ, ಇಲ್ಲಿ ಕೊಟ್ಟಿರುವ ದರಗಳನ್ನು ನೋಡಿದರೆ ನಮ್ಮಲ್ಲಿರತಕ್ಕಂಥ ಪ್ರಯಾಣದ ದರ ತಮಿಳುನಾಡಿನಲ್ಲಿರತಕ್ಕಂಥ ಪ್ರಯಾಣದ ದರಗಳಿಗಿಂತ ಜಾಸ್ತಿ ಇದೆ. ಇದನ್ನು ಮಾನ್ಯ ಮಂತ್ರಿಯವರೂ ಒಪ್ಪಿಕೊಂಡಿದ್ದಾರೆ. ಕಳೆದ ಬಜೆಟ್ ಅಧಿವೇಶನದಲ್ಲಿ ನಾನು ಈ ಪ್ರಯಾಣದ ದರಗಳ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕಾದ ಆವಶ್ಯಕತೆ ಇದೆಯೆಂದು ಹೇಳಿದ್ದೆ. ಅದನ್ನು ಮಾನ್ಯ ಮಂತ್ರಿಯವರೂ ಒಪ್ಪಿಕೊಂಡಿದ್ದರು. ಈಗಲೂ ಸಹ ಇಡೀ ರಾಷ್ಟ್ರದಲ್ಲಿ ಇತರ ರಾಜ್ಯಗಳಲ್ಲಿರತಕ್ಕಂಥ ಬಸ್ ಪ್ರಯಾಣದ ದರಗಳಿಗಿಂತ ನಮ್ಮ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ ದರಗಳು ಜಾಸ್ತಿಯಾಗಿದೆ ಎಂಬುದನ್ನು ಅವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈ ಪ್ರಯಾಣದ ದರಗಳನ್ನು ಕಡಿಮೆ ಮಾಡುವ ಬಗ್ಗೆ ಪುನರ್ ವಿಮರ್ಶೆ ಮಾಡತಕ್ಕಂಥಾದ್ದು ಅತ್ಯಾವಶ್ಯಕವಾಗಿರುವುದರಿಂದ ಈ ಬಗ್ಗೆ ಆದಷ್ಟು ಶೀಘ್ರವಾಗಿ ಪುನರ್ ವಿಮರ್ಶೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಕಮಿಟಿಯ ರಿಪೋರ್ಟ್ ಬರುವವರೆಗೂ ಮಾನ್ಯ ಸದಸ್ಯರು ತಾಳ್ಮೆಯಿಂದ ಇರಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಈ ಬಸ್ ಪ್ರಯಾಣದ ದರಗಳು ಹೆಚ್ಚಿರುವುದರ ಬಗ್ಗೆ ನಾವು ಹೋದ ವರ್ಷ ಹಾಕಿದ ಪ್ರಶ್ನೆಗೆ ಇವತ್ತು ಉತ್ತರ ಬಂದಿದೆ. ಹೋದ ವರ್ಷ ಇದೇ ಸಂದರ್ಭದಲ್ಲಿ 'ಕೆ.ಎಸ್.ಆರ್.ಟಿ.ಸಿ.ಯವರು ಬಸ್ ದರಗಳನ್ನು ಹೆಚ್ಚಿಸಬೇಕೆಂದಿದ್ದಾರೆ ಎನ್ನತಕ್ಕಂಥ ವಿಚಾರವನ್ನು ನಾವು ಪತ್ರಿಕೆಯಲ್ಲಿ ಓದುತ್ತಿದ್ದೇವೆ ; ಈಗಾಗಲೇ ತಮಿಳುನಾಡು ಮತ್ತು ಇತರ ರಾಜ್ಯಗಳ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಈ ದರ ಕಡಿಮೆ ಇದೆ, ನಮ್ಮಲ್ಲಿ ಈಗಾಗಲೇ ಹೆಚ್ಚಾಗಿದೆ ಎಂದು ಹೇಳಿದಾಗ ಈ ಬಗ್ಗೆ ಪರಿಶೀಲಿಸಿ ಸೂಕ್ತವಾಗಿ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದವರು ಯಥಾಪ್ರಕಾರ ಈ ಬಸ್ ಪ್ರಯಾಣ ದರಗಳನ್ನು ಹೆಚ್ಚಿಸುತ್ತೇವೆಂದು ಹೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರ ನಿಶ್ಚಿತವಾದ ಅಭಿಪ್ರಾಯವೇನು ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಯಾರು ಆ ರೀತಿ ಹೇಳಿದರೋ ಗೊತ್ತಿಲ್ಲ. ನಾನೇನು ಹೇಳಿಲ್ಲ.

Vacant Posts of Primary School Teachers during the year 1981

573. SRI G. BASAVANNAPPA (Holehonnur)—Will the Minister of State for Primary and Secondary Education be pleased to state :

(a) number of vacancies of the Primary School Teachers proposed to be filled by the Government in the year 1981 ;

(b) the criteria employed in recruiting these teachers ;

(c) whether criteria and recruitment rules are framed for recruiting Primary School Teachers ?

SMT. NAGAMMA C. KESHAVAMURTHY.—(Minister of State for Primary and Secondary Education).—

(a) 6468.

(b) Age and merit.

(c) Yes.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ ವಯಸ್ಸು ಮತ್ತು ಅರ್ಹತೆಯ ಆಧಾರದ ಮೇಲೆ ೨೯ ವರ್ಷ ವಯಸ್ಸಾದವರನ್ನು ನೇಮಕ ಮಾಡಿಕೊಂಡಿರುವ ರಿಕ್ರೂಟ್‌ಮೆಂಟ್ ರೂಲ್ಸ್‌ನ ವಿವರಣೆಯನ್ನು ಒದಗಿಸಿಕೊಡುತ್ತೀರಾ ?

ಶ್ರೀ ಗಂಗಾಧರಗೌಡ (ಯುವಜನ ಸೇವಾ ಮಂತ್ರಿಗಳು ಪ್ರೈಮರಿ ಮತ್ತು ಸೆಕೆಂಡರಿ ಮಂತ್ರಿಗಳ ಪರವಾಗಿ)—ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ೧೫-೭-೮೧ರಲ್ಲಿ ಮಾಡಲಾಯಿತು. ಮತ್ತೆ ೮-೭-೮೧ರಲ್ಲಿ ಒಂದು ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಮಾಡಲಾಯಿತು. ಸದಸ್ಯರಿಗೆ ರಿಕ್ರೂಟ್‌ಮೆಂಟ್ ರೂಲ್ಸ್ ಬೇಕಾದರೆ ಒದಗಿಸಿಕೊಡುತ್ತೇವೆ.

ಅಧ್ಯಕ್ಷರು.—ಗೆಜೆಟ್ ನೋಟಿಫಿಕೇಶನ್ ನೋಡಿದರೆ ವಿವರವಾಗಿ ಗೊತ್ತಾಗುತ್ತದೆ.

ಶ್ರೀ ಅಜೀಜ್ ಸೇಠ್.—ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಎಷ್ಟು ಜನ ಉರ್ದು ಉಪಾಧ್ಯಾಯರು ಇದ್ದಾರೆ ?

ಶ್ರೀ ಗಂಗಾಧರಗೌಡ.—ಅದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಐ.ಪಿ.ಡಿ. ಸಾಲಪ್ಪ.—ಈಗ ೬,೪೬೮ ಹುದ್ದೆಗಳನ್ನು ನೇಮಿಸಿ ಕೊಂಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ. ಇದರಲ್ಲಿ ಹರಿಜನ ಮತ್ತು ಗಿರಿಜನರಿಗೆ ೧೮ ಪರ್ಸೆಂಟ್ ಮೀಸಲಾತಿಯನ್ನು ಕೊಟ್ಟಿದ್ದಾರೆಯೇ ?

ಶ್ರೀ ಗಂಗಾಧರಗೌಡ.—೧೮ ಪರ್ಸೆಂಟ್ ಮೀಸಲಾತಿಯನ್ನು ಭರ್ತಿ ಮಾಡಿ ನಂತರ ಬೇರೆಯ ಹುದ್ದೆಗಳನ್ನು ಭರ್ತಿ ಮಾಡಿಕೊಂಡಿದ್ದೇವೆ.

ಶ್ರೀ ಜಿ. ಬಸವಣ್ಣಪ್ಪ.—ವಯಸ್ಸು ಮತ್ತು ಅರ್ಹತೆಯ ಮೇಲೆ ಉಪಾಧ್ಯಾಯರನ್ನು ನೇಮಕ ಮಾಡಿದ್ದಾರೆ. ಇಂಟರ್‌ವ್ಯೂ ಇಲ್ಲದೆ ನೇಮಕ ಮಾಡಿಕೊಂಡಿರುವುದರಿಂದ ತೊಂದರೆಯಾಗುವುದಿಲ್ಲವೇ ?

ಶ್ರೀ ಗಂಗಾಧರಗೌಡ.—ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಬಿ.ವಿ. ಕಕ್ಕಿಲಾಯ.—ತಮ್ಮ ಉತ್ತರದಲ್ಲಿ ೬,೪೬೮ ಹುದ್ದೆಗಳು ಖಾಲಿ ಇದ್ದವು ಎಂದು ಹೇಳಿದ್ದೀರಿ. ಆದರೆ ರಾಜ್ಯದಲ್ಲಿರುವ ಒಟ್ಟು ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಖ್ಯೆ ಎಷ್ಟು ? ಇದರಲ್ಲಿ ಈಗಾಗಲೇ ಎಷ್ಟು ಜನರನ್ನು ನೇಮಕ ಮಾಡಿಕೊಂಡಿದ್ದೀರಿ. ಅದರ ಅಂಕಿ ಅಂಶಗಳನ್ನು ತಿಳಿಸುತ್ತೀರಾ ?

ಶ್ರೀ ಗಂಗಾಧರಗೌಡ.—ಒಟ್ಟು ೬ ೧೭೫ ಹುದ್ದೆಗಳು ಇದ್ದು ಇದರಲ್ಲಿ ೨,೬೬೪ ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಜಿ. ಕೆ. ತಕ್ಕೇಡ್.—ವಯಸ್ಸು ಮತ್ತು ಅರ್ಹತೆಯ ಆಧಾರದ ಮೇಲೆ ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವುದಕ್ಕೆ ನಿಯಮಗಳನ್ನು ರಚಿಸಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದರಿಂದ ಯಾರು ಪ್ರತಿಭಾವಂತ ವಿದ್ಯಾರ್ಥಿಗಳು ಇರುತ್ತಾರೋ ಅಂತಹವರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಇದನ್ನು ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಗಂಗಾಧರಗೌಡ.—೨೯ ವರ್ಷ, ೩೦ ವರ್ಷ, ೩೫ ವರ್ಷಗಳು ಆದ ಅಭ್ಯರ್ಥಿಗಳಿಗೆ ಅರ್ಹತೆಯನ್ನು ಕೊಡಬೇಕೆನ್ನುವ ಉದ್ದೇಶದಿಂದ ಹಾಗೂ ಮಾನವೀಯ ದೃಷ್ಟಿಯಿಂದ ಇದು ಒಳ್ಳೆಯ ನಿಯಮ ವೆಂದು ಸರ್ಕಾರದ ಭಾವನೆ. ಇನ್ನೂ ೨೫.೨೬.೨೮ ವರ್ಷ ವಯಸ್ಸಾದಂತಹವರಿಗೆ ಕ್ರಮೇಣ ಕೆಲಸ ಸಿಗುತ್ತದೆ.

ಶ್ರೀ ಅಣ್ಣಾರಾವ್ ಪಾಟೀಲ್.—ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಎಷ್ಟು ಹುದ್ದೆಗಳಿಗೆ ನೇಮಿಸಿ ಕೊಂಡಿದ್ದೀರಿ.

ಶ್ರೀ ಗಂಗಾಧರಗೌಡ.—ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸಿಕೊಡುತ್ತೇವೆ.

ಶ್ರೀ ಜಿ. ಗಂಗಣ್ಣ.—ಸ್ಪೆಷಲ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿದ್ದೀರಿ. ಇದರಲ್ಲಿ ಮಿನಿಮಮ್ ವಯಸ್ಸನ್ನು ೩೯ ವರ್ಷಗಳಿಂದ ೪೫ ವರ್ಷಗಳೆಂದು ಮಾಡಿದ್ದೀರಿ. ಎಸ್.ಸಿ ಮತ್ತು ಎಸ್.ಟಿ.ಗೆ ೪೫ ರಿಂದ ೪೫ ವರ್ಷಗಳು ಎಂದು ಮಾಡಿದ್ದೀರಿ. ಈ ರೀತಿ ಇರುವಾಗ ೨೯ ವರ್ಷಗಳಿಗೆ ನೇಮಕ ಮಾಡುವ ಅವಶ್ಯಕತೆ ಎಲ್ಲಿ ಬರುತ್ತದೆ ?

ಶ್ರೀ ಗಂಗಾಧರಗೌಡ.—ವಯಸ್ಸಾದಂತಹವರಿಗೆ ಉದ್ಯೋಗವನ್ನು ಒದಗಿಸಿ ಕೊಡುವ ಉದ್ದೇಶ ದಿಂದ ಸರ್ಕಾರ ಈ ರೀತಿ ಮಾಡಿದ್ದಾರೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

REPRESENTATIONS

ಶ್ರೀ ಕಳ್ಳಿಗುದ್ದ.—ಮಾನ್ಯ ಅಧ್ಯಕ್ಷರೇ ಬಾಗಲಕೋಟೆಯಲ್ಲಿ ಗಲಾಟೆಯಾಗಿದೆ. ಅದು ಏನಾ ಯಿತು ಎಂದು ನನಗೆ ಬಹಳ ಕಳಕಳಿಯಾಗಿದೆ.

ಅಧ್ಯಕ್ಷರು.—ಆ ವಿಷಯದ ಬಗ್ಗೆ ಒಂದು ನೋಟೀಸನ್ನು ಬರೆದು ಕೊಡಿ.

ಶ್ರೀ ಕಳ್ಳಿಗುದ್ದ.—ನಾನು ಈಗಾಗಲೇ ನೋಟೀಸನ್ನು ಕೊಟ್ಟಿದ್ದೇನೆ.

ಶ್ರೀ ಐ.ವಿ.ಡಿ. ಸಾಲಪ್ಪ.—ಮಾನ್ಯ ಅಧ್ಯಕ್ಷರೇ ನಾವು ಕಳುಹಿಸಿಕೊಟ್ಟಿರುವಂತಹ ಪ್ರಶ್ನೆಗಳಿಗೆ ಜವಾಬು ಬರುತ್ತಿಲ್ಲ. ಆದ್ದರಿಂದ ತಾವು ನಮಗೆ ನ್ಯಾಯ ದೊರಕಿಸಿ ಕೊಡಬೇಕು.

ಅಧ್ಯಕ್ಷರು.—ವಿಧಾನ ಸಭೆ ಸೇರುವುದಕ್ಕಿಂತ ಮುಂಚಿತವಾಗಿ ನಾವು ನೋಟೀಸು ಕೊಡ ಬೇಕು ಎಂದು ತಿಳಿಸಿದ ಎಷ್ಟೋ ದಿವಸಗಳಿಗೆ ನೋಟೀಸುಗಳು ಬರುತ್ತದೆ. ವಿಧಾನಸಭೆ ಸೇರಿ ಎರಡು ಮೂರು ದಿವಸಗಳಾದ ಮೇಲೆ ಜಾಸ್ತಿ ನೋಟೀಸುಗಳು ಬರುತ್ತವೆ. ಇದರಿಂದ ಏನಾಗುತ್ತದೆ ಎಂದರೆ ಮೊದಲು ಯಾರು ನೋಟೀಸು ಕೊಟ್ಟಿರುತ್ತಾರೋ ಅಂತಹ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬೇಗ ಬರುತ್ತದೆ. ತಡವಾಗಿ ಕೊಟ್ಟ ಪ್ರಶ್ನೆಗಳಿಗೆ ಸರ್ಕಾರದಿಂದ ತಡವಾಗಿ ಉತ್ತರ ಬರುತ್ತದೆ.

ಶ್ರೀ ಐ.ವಿ.ಡಿ. ಸಾಲಪ್ಪ.—ನಾನು ಪ್ರಶ್ನೆಯನ್ನು ಕಳುಹಿಸಿಕೊಟ್ಟು ಒಂದು ವರ್ಷವಾಗಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನನ್ನ ಛೇಂಬರ್‌ಗೆ ಬಂದು ಮಾತನಾಡಬಹುದು.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೇ ನೆನ್ನೆ ೩೧ರ ಕೆಳಗೆ ಗೋಖಲೆ ಸಮಿತಿಯ ವರದಿಯ ಬಗ್ಗೆ ಚರ್ಚೆ ಮಾಡಲು ಬಂದಾಗ ಕನ್ನಡದಲ್ಲಿ ವರದಿ ಬಂದಿದೆ ಇಂಗ್ಲೀಷ್‌ನಲ್ಲಿಯೂ ಒಂದು ವರದಿ ಬರಲಿ ಆ ನಂತರ ಬೇಕಾದರೆ ಚರ್ಚೆಗೆ ತೆಗೆದುಕೊಳ್ಳುತ್ತೇವೆ ಎಂದು ತಾವು ಹೇಳಿದ್ದೀರಿ. ಈಗ ಧಾರವಾಡದಿಂದ ನನಗೆ ಫೋನ್ ಬಂದಿದೆ. ಭಿನ್ನವಾಭಿಪ್ರಾಯದಿಂದ ಗಲಭೆ ನಡೆಯುತ್ತಿದೆ ಎಂದು. ಯಾವುದೋ ಒಂದು ದುಷ್ಟ ಶಕ್ತಿಗಳು ಈ ಗಲಭೆಯನ್ನು ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ನಾವು ಈ ವಿಷಯದ ಬಗ್ಗೆ ಒಂದು ಸೂಚನೆಯನ್ನು ಕೊಟ್ಟಿದ್ದೇವೆ. ನಾವು ಕನ್ನಡದ ವಿರೋಧಿಗಳು ಎಂದು ಜನ ತಿಳಿದುಕೊಂಡಿದ್ದಾರೆ. ಆದ ರಿಂದ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ವನ್ನು ಮಾಡಿಕೊಟ್ಟರೆ ನಮ್ಮ ಮನಸ್ಸಿನಲ್ಲಿ ಏನಿದೆ ಎಂಬುದು ಜನರಿಗೆ ಅರ್ಥ ಸಂಪೂರ್ಣವಾಗಿ ತಿಳಿಯುತ್ತದೆ. ಆದ್ದರಿಂದ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟೆತ್ತಿ ಧಾರವಾಡದಲ್ಲಿ ಗಲಭೆಯಾಗುತ್ತಿದೆ.